Indian Journal of History and Archaeology

ISSN (E):2582-225X
Vol-1 Issue 2, July- August 2019, Pp 20-30

# ಚಿಕ್ಕಮಗಳೂರು ಜಿಲ್ಲೆಯ ದಲಿತರ ರಾಜಕೀಯ: ಒಂದು ಚಾರಿತ್ರಿಕ ಪರೀವೀಕ್ಷಣೆ

**ಸವಿತ.ಎಸ್.ಬಿ.**

**ಸವಿತ.ಎಸ್ ಬಿ.**
ಸಂಶೋಧಕರು
ಇತಿಹಾಸ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು

ಭಾರತದ ಜಾತಿ ಆಧಾರಿತ ರಾಜಕಾರಣದ ಈ ಚರಿತ್ರೆಯ ಸಂದರ್ಭಧಲ್ಲಿ ಅಂಬೇಡ್ಕರ್ ಎಂಬ ದೈತ ಪ್ರತಿಭೆ ಯಾವುದೇ ರಾಜಕೀಯ ಹಿನ್ನೆಲೆಯೂ ಇಲ್ಲದ ಕುಟುಂಬವೊಂದರಲ್ಲಿ ಹುಟ್ಟಿ ಬಂದವರು. ಹೀಗಿದ್ದರೂ ಕೂಡ ಜಗತ್ತಿನ ರಾಜಕೀಯ ಇತಿಹಾಸದ ಪರಂಪರೆಯಲ್ಲಿ ಅಳಿಸಲಾಗದ ಮುದ್ರೆಯನ್ನು ಹಾಕಿರುವಂಥ ಒಬ್ಬ ರಾಜಕೀಯ ಮುತ್ಸದ್ಧಿ. ಅಂಬೇಡ್ಕರ್ ಎಂಬ ರಾಜಕೀಯ ಶಕ್ತಿಯಿಂದ ದಮನಿತ ಜನವರ್ಗಗಳು ಪ್ರೇರಣೆ ಹಾಗೂ ಪ್ರಭಾವಿತಗೊಂಡರು. ಹೀಗೆ, ಪ್ರಭಾವಿತಗೊಂಡು ಭಾರತದಾದ್ಯಂತ ಹಲವು ದಲಿತ ರಾಜಕೀಯ ವ್ಯಕ್ತಿತ್ವಗಳು ಉದಯಗೊಂಡಿರುತ್ತವೆ. ಅದರಲ್ಲಿ ಕರ್ನಾಟಕದಲ್ಲಿಯೂ ಬಿ.ಶ್ಯಾಮಸುಂದರ್, ಬಿ.ಬಸವಲಿಂಗಪ್ಪ, ಎನ್.ರಾಚಯ್ಯ, ಬಿ.ರಾಚಯ್ಯ, ಡಾ.ಎಂ.ಮಲ್ಲಿಕಾರ್ಜುನ ಖರ್ಗೆ, ಬಿ.ಶಂಕರನಂದ, ವಿ.ಶ್ರೀನಿವಾಸಪ್ರಸಾದ್, ಬಿ.ಸೋಮಶೇಖರ್, ಡಾ.ಜಿ.ಪರಮೇಶ್ವರ, ಎಚ್.ಸಿ.ಮಹಾದೇವಪ್ಪ, ಎಚ್.ಆಂಜನೇಯ, ಆರ್.ಧೃವನಾರಾಯಣ, ಎನ್.ಮಹೇಶ್ ಮತ್ತು ಪಿ.ಎಂ.ನರೇಂದ್ರಸ್ವಾಮಿ ಅವರಂಥ ಅನೇಕರು ಉದಯವನ್ನು ಪಡೆದುಕೊಂಡಿದ್ದಾರೆ.

ಈ ನೆಲೆ–ಹಿನ್ನೆಲೆಯನ್ನು ಪರಿಗಣಿಸಿಯೇ ಚಿಕ್ಕಮಗಳೂರು ಜಿಲ್ಲೆಯ ದಲಿತ ರಾಜಕೀಯವನ್ನು ಪರಿವೀಕ್ಷಣೆಗೆ ಮುಂದಿನಂತೆ ಒಳಪಡಿಸಿರುವಂಥ ಪ್ರಯತ್ನವನ್ನು ಇಲ್ಲಿ ಮಾಡಲಾಗಿರುತ್ತದೆ. ಏಕೆಂದರೆ,

ಚಿಕ್ಕಮಗಳೂರು ಜಿಲ್ಲೆಯ ಸಮಗ್ರ ಚರಿತ್ರೆಯನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದಾಗ; ಚರಿತ್ರೆಯ ಉದ್ದಕ್ಕೂ ಒಕ್ಕಲಿಗ ಸಮುದಾಯವು ಈ ಜಿಲ್ಲೆಯಲ್ಲಿ ಪ್ರತಿಯೊಂದು ವಲಯದಲ್ಲಿಯೂ ಪ್ರಾಬಲ್ಯವನ್ನು ಸಾಧಿಸಿರುವುದು ಕಂಡುಬಂದಿರುತ್ತದೆ. ಇಂಥ ಸಮುದಾಯದ ಬಲಿಷ್ಠ ರಾಜಕಾರಣದ ಸಂದರ್ಭದಲ್ಲಿಯೂ ಬಿ.ಬಿ.ನಿಂಗಯ್ಯ, ಮೋಟಮ್ಮ ಹಾಗೂ ಎಂ.ಪಿ.ಕುಮಾರಸ್ವಾಮಿ ಅವರಂಥ ನಾಯಕರು ತಮ್ಮದೇ ಆದಂಥ ಪ್ರಾಮುಖ್ಯತೆಯನ್ನು ಹೊಂದಿದ್ದಾರೆ. ಇವರೊಟ್ಟಿಗೆ ನಾಡಿನ ಹಿರಿಯ ರಾಜಕೀಯ ಮುತ್ಸದ್ಧಿಯಾಗಿದ್ದಂಥ ಕೆ.ಎಚ್.ರಂಗನಾಥ್ ಅವರು ಕೂಡ ಈ ಜಿಲ್ಲೆಯನ್ನು ಪ್ರತಿನಿಧಿಸಿ ಜಿಲ್ಲೆಗೆ ಹಾಗೂ ದಲಿತ ಜನವರ್ಗಕ್ಕೆ ತಮ್ಮದೇ ಆದಂಥ ಕೊಡುಗೆಯನ್ನು ನೀಡಿದವರು. ಇವರು ಈ ಜಿಲ್ಲೆಯಲ್ಲಿ ಒಂದು ಅಸ್ಥಿಭಾರವನ್ನು ನಿರ್ಮಾಣ ಮಾಡಿದವರು. ಏಕೆಂದರೆ ಚಿಕ್ಕಮಗಳೂರು ಜಿಲ್ಲೆಯು ಒಕ್ಕಲಿಗ ಜನವರ್ಗದವರ ಪ್ರಬಲ ಹಿಡಿತದಲ್ಲಿ ಸಿಲುಕಿರುವುದು ಇವತ್ತಿಗೂ ಅದನ್ನು ಕಾಣಬಹುದು. ಹೀಗೆ ಹಿಡಿತಕ್ಕೆ ಈ ಜಿಲ್ಲೆಯ ರಾಜಕಾರಣವು ಸಿಲುಕಿದ್ದರೂ ದಲಿತ ನಾಯಕರು ತಮ್ಮದೇ ಅಸ್ಥಿತ್ವವನ್ನು ಅವರವರ ಕಾಲಘಟ್ಟದಲ್ಲಿ ಕಟ್ಟಿಕೊಂಡಿದ್ದಾರೆ. ಅದರೊಟ್ಟಿಗೆ ತಾವು ಪ್ರತಿನಿಧಿಸಿರುವ ಸಮುದಾಯದ ಸಬಲೀಕರಣಕ್ಕೂ ತುಡಿದಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ದಲಿತ ರಾಜಕಾರಣಕ್ಕೆ ಅಷ್ಟು ಮಾನ್ಯತೆ ಇರಲಿಲ್ಲ. ಈ ಜಿಲ್ಲೆಯಲ್ಲಿ ರಾಜಕೀಯ ಪ್ರಕ್ರಿಯೆಗಳು ನಡೆಯುತ್ತಿದ್ದರು ಕೂಡ ದಲಿತ ಜನವರ್ಗವೂ ಕೂಡ ಇದರಿಂದ ವಂಚಿತಗೊಂಡು ಅವರಿಂದ ದಮನಕ್ಕೆ ಒಳಗಾಗಿದ್ದರು. ಆದರೆ ಸ್ವಾತಂತ್ರ್ಯ ಅನಂತರ ಸಂವಿಧಾನ ಜಾರಿಗೆ ಬಂದ ಅನಂತರದಲ್ಲಿ ಅದರ ಅನ್ವಯ ದೇಶದಾದ್ಯಂತ ದಲಿತ ಜನವರ್ಗದವರಿಗೆ ಕೆಲವು ವಿಶೇಷವಾದಂಥ ಸ್ಥಾನಗಳನ್ನು ಮೀಸಲಿಡಲಾಗಿತ್ತು. ಇವುಗಳನ್ನು ಮೀಸಲು ಲೋಕಸಭಾ ಕ್ಷೇತ್ರಗಳು ಹಾಗೂ ರಾಜ್ಯಗಳ ಮೀಸಲು ವಿಧಾನಸಭೆಗಳೆಂದು ನೀಡಲಾಗಿತ್ತು. ಈ ಚುನಾಯಿಕ ಕ್ಷೇತ್ರಗಳಲ್ಲಿ ದಲಿತ ಜನವರ್ಗದವರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತದೆ. ಆದರೂ ಈ ದಲಿತ ಜನವರ್ಗದವರು ಇತರೆ ಸಾಮಾನ್ಯ ಚುನಾವಣಾ ಕ್ಷೇತ್ರಗಳಲ್ಲಿ ನಿರ್ಣಾಯಕ ಮತದಾರರೇ ಆಗಿರುತ್ತಾರೆ, ಆದರೆ, ಇದನ್ನು ಸರಿಯಾದ ಕ್ರಮದಲ್ಲಿ ಅರಿಯದೇ ಬೇರೆ ಬಲಿಷ್ಠರ ಹಿಡಿತದಲ್ಲಿ ಸಿಲುಕಿದ್ದಾರೆ. ಇಂಥ ಹಿಡಿತದಿಂದ ಬಿಡುಗಡೆಗೊಳಿಸುವುದನ್ನು **ಇಂದೂ ರಾಜಕಾರಣದಲ್ಲಿ ಸಂಕೋಲೆಯಿಂದ ಸ್ವಾತಂತ್ರ್ಯದೆಡೆಗೆ ಎಂಬ ವ್ಯಾಖ್ಯಾನವೂ ಬರಬೇಕಾಗಿದೆ.** ಅಂದರೆ, ದಲಿತ ಜನವರ್ಗದವರು ಮೀಸಲು ಕ್ಷೇತ್ರಗಳನ್ನು ಮೀರಿ ಒಂದು ರಾಜಕೀಯ ಪ್ರಬಲ ಶಕ್ತಿಯಾಗಿ ಬೆಳೆಯಬೇಕಾಗಿದೆ. ಆದ್ದರಿಂದ ದಲಿತ ನಾಯಕರಲ್ಲಿರುವ ತಮ್ಮ ತಮ್ಮ ಇರ್ಷೆಗಳನ್ನು ಒಣ ಪ್ರತಿಷ್ಠೆಯನ್ನು ಒಂದು ಕಡೆ ಇಟ್ಟು ದಲಿತ ರಾಜಕಾರಣವನ್ನು ಅಂಬೇಡ್ಕರ್ ಅವರು ಹಾಕಿಕೊಟ್ಟಿರುವಂಥ ಇಂದು ಸೈದ್ಧಾಂತಿಕ ನೆಲೆಯಲ್ಲಿ ಕಟ್ಟಾಬೇಕಾಗಿದೆ. ಅದನ್ನು ಇಂದಿನ ದಲಿತ ಯುವ

ಸಮುದಾಯವು ಬಯಸುತ್ತದೆ. ಹಾಗದಾಗ ಮಾತ್ರ ದಲಿತ ರಾಜಕಾರಣವು ಅವಲಂಬಿತ ರಾಜಕಾರಣದಿಂದ ಬಿಡುಗಡೆಗೊಂಡು ಸ್ವತಂತ್ರ ರಾಜಕಾರಣವನ್ನು ಮಾಡಲು ಸಾಧ್ಯ.

ಭಾರತ ದೇಶಕ್ಕೆ ಸ್ವಾತಂತ್ರ್ಯವೂ 1947ನೇ ಆಗಸ್ಟ್ 15 ರಂದು ಬಂದಿರುತ್ತದೆ. ಆದರೆ, ಅದು ತನ್ನ ಆಡಳಿತದ ಪ್ರಕ್ರಿಯೆಯನ್ನು ಆರಂಭಿಸಿದ್ದು ಮಾತ್ರ 1950ನೇ ಜನವರಿ 26ರ ರಂದು. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆ 1951 ಮತ್ತು ರಾಜ್ಯದಲ್ಲಿ 1952ರಲ್ಲಿ ನಡೆದಿರುತ್ತದೆ. ಈ ಚುನಾವಣೆಯಲ್ಲಿ ದೇಶದಾದ್ಯಂತ 489 ಲೋಕಸಭಾ ಕ್ಷೇತ್ರಗಳು ಸ್ಥಾಪಿತವಾಗಿದ್ದವು. ಅವುಗಳಲ್ಲಿ ಮೈಸೂರು ರಾಜ್ಯದಲ್ಲಿ 9 ಲೋಕಸಭಾ ಕ್ಷೇತ್ರಗಳು ರಚಿತಗೊಂಡಿದ್ದವು. ಈ ಒಂಭತ್ತು ಕ್ಷೇತ್ರಗಳಿಂದ 11 ಜನರು ಪ್ರಾತಿನಿಧ್ಯವನ್ನು ಪಡೆದುಕೊಂಡಿದ್ದರು. ಅಂದರೆ, ಎರಡು ಲೋಕಸಭಾ ಕ್ಷೇತ್ರಗಳು ದ್ವಿಸದಸ್ಯ ಕ್ಷೇತ್ರಗಳಾಗಿದ್ದವು ಎಂಬುದನ್ನು ಗ್ರಹಿಸಬಹುದು. ಆದರೆ ಹಾಸನ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರವೂ ಒಂದು ಸಾಮಾನ್ಯ ಕ್ಷೇತ್ರವಾಗಿತ್ತು. ಆದ್ದರಿಂದಲೇ ಈ ಕ್ಷೇತ್ರದಲ್ಲಿ ದಲಿತ ಜನವರ್ಗಕ್ಕೆ ಸೇರದಂಥ ಯಾರು ಕೂಡ ಸ್ಪರ್ಧಿಸಿರುವುದಿಲ್ಲ ಎಂಬುದು ಚುನಾವಣಾ ಫಲಿತಾಂಶದ ವರದಿಯಿಂದ ತಿಳಿದುಬಂದಿರುತ್ತದೆ. ಹಾಗೆಯೇ ಮೈಸೂರು ರಾಜ್ಯದಲ್ಲಿ 80 ವಿಧಾನಸಭಾ ಕ್ಷೇತ್ರಗಳು ರಚಿತಗೊಂಡಿದ್ದವು. ಇವುಗಳ ಪೈಕಿ 61 ಏಕಸದಸ್ಯ ಹಾಗೂ 19 ದ್ವಿಸದಸ್ಯ ಕ್ಷೇತ್ರಗಳಾಗಿದ್ದವು. ಅವುಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿಕ್ಕಮಗಳುರು–ಮೂಡಿಗೆರೆ, ಕಡೂರು, ಭದ್ರಾವತಿ, ತೀರ್ಥಹಳ್ಳಿ, ಕೊಪ್ಪ ವಿಧಾನಸಭಾ ಕ್ಷೇತ್ರಗಳು ಅಸ್ಥಿತ್ವಕ್ಕೆ ಬಂದಿದ್ದವು. ಅವುಗಳಲ್ಲಿ ಚಿಕ್ಕಮಗಳೂರು–ಮೂಡಿಗೆರೆ ವಿಧಾನಸಭಾ ಕ್ಷೇತ್ರವು ದ್ವಿಸದಸ್ಯ ಕ್ಷೇತ್ರವಾಗಿತ್ತು. ಈ ದ್ವಿಸದಸ್ಯ ವಿಧಾನಸಭಾ ಕ್ಷೇತ್ರದ ವಿಶೇಷತೆ ಏನೆಂದರೆ; ಇಲ್ಲಿನ ಮತದಾರರು ಎರಡು 'ಮತ'ಗಳ ಹಕ್ಕನ್ನು ಪಡೆದಿರುವುದು ಒಂದು ಮತವನ್ನು ಸಾಮಾನ್ಯವರ್ಗದಿಂದ ಚುನಾವಣೆಯಲ್ಲಿ ಸ್ಪರ್ಧಿಸಿರುವ ವ್ಯಕ್ತಿಗೆ ಹಾಗೂ ಇನ್ನೊಂದು ಮತವನ್ನು ದಲಿತವರ್ಗದಿಂದ ಸ್ಪರ್ಧಿಸಿರುವ ವ್ಯಕ್ತಿಗೆ ಚಲಾಯಿಸುವುದೇ ಆಗಿತ್ತು. ಈ ಚುನಾವಣೆಯಿಂದಲೇ ಚಿಕ್ಕಮಗಳೂರು ಜಿಲ್ಲೆಯಲ್ಲಿ ದಲಿತ ರಾಜಕಾರಣವು ಅಧಿಕೃತವಾಗಿ ಆರಂಭಗೊಂಡಿರುತ್ತದೆ.

1951ರಲ್ಲಿ ಮೈಸೂರು ರಾಜ್ಯದಲ್ಲಿನ ವಿಧಾನಸಭೆಗೆ ಚುನಾವಣೆಯೂ ಘೋಷಣೆ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳು ಸಕ್ರಿಯವಾಗಿ ಚುನಾವಣೆಯಲ್ಲಿ ತೊಡಗಿಸಿಕೊಂಡು ಆ ಮುಖೇನ ತನ್ನ ಪಕ್ಷದ ಉಮೇದುವಾರಿಕೆಯಿಂದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದವು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಚಿಕ್ಕಮಗಳೂರು–ಮೂಡಿಗೆರೆ ವಿಧಾನಸಭಾ ಕ್ಷೇತ್ರವು ದ್ವಿಸದಸ್ಯ ಕ್ಷೇತ್ರವಾಗಿತ್ತು. ಈ ಕ್ಷೇತ್ರದಲ್ಲಿ ಪ್ರಥಮ ಚುನಾವಣೆಯಲ್ಲಿಯೇ 06 ಜನರು ಸ್ಪರ್ಧಿಸಿದ್ದರು. ಇವರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಜಿ. ಪುಟ್ಟಸ್ವಾಮಿ ಮತ್ತು ಭಾರತೀಯ ಜನಸಂಘ ಪಕ್ಷದಿಂದ ಬಿ.ಎನ್.ಲಿಂಗಣ್ಣ ಎನ್ನುವವರು ದಲಿತ

ಜನಸಮುದಾಯದ ಪರವಾಗಿ ಸ್ಪರ್ಧಿಸಿದ್ದರು. ಆದರೆ ಚುನಾವಣೆ ನಡೆದು ಫಲಿತಾಂಶ ಬಂದಾಗ, ಜಿ. ಪುಟ್ಟಸ್ವಾಮಿ ಅವರು 13,561 ಮತಗಳನ್ನು ಶೆಕಡಾ 28077ರಷ್ಟು ಪಡೆದು, ಬಿ.ಎನ್.ಲಿಂಗಣ್ಣ ಅವರನ್ನು ಸೋಲಿಸಿದರು. ಇವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಅನಂತರ ದಲಿತ ರಾಜಕಾರಣಕ್ಕೆ ಮುನ್ನುಡಿಯನ್ನು ಬರೆದವರು. ಅಂದರೆ, ಮೈಸೂರು ರಾಜ್ಯದ ಪ್ರಥಮ ವಿಧಾನಸಭೆಯನ್ನು ಪ್ರವೇಶಿಸಿದರು.

ಎರಡನೇ ಮೈಸೂರು ರಾಜ್ಯದ ವಿಧಾನಸಭಾ ಚುನಾವಣೆಯೂ 1957ರಲ್ಲಿ ನಡೆದಿರುತ್ತದೆ. ಈ ಚುನಾವಣೆಯಲ್ಲಿ ರಾಜ್ಯದಲ್ಲಿ ಒಟ್ಟು 179 ವಿಧಾನಸಭಾ ಕ್ಷೇತ್ರಗಳು ಅಸ್ಥಿತ್ವಕ್ಕೆ ಬಂದಿದ್ದವು. ಅವುಗಳ ಪೈಕಿ 151 ಸಾಮಾನ್ಯ ಕ್ಷೇತ್ರಗಳು, 27 ದ್ವಿಸದಸ್ಯ ಕ್ಷೇತ್ರಗಳು ಹಾಗೂ ಪರಿಶಿಷ್ಟ ಪಂಗಡಕ್ಕೆ ಒಂದು ಕ್ಷೇತ್ರವು ಮೀಸಲಾಗಿತ್ತು. ಅವುಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಚಿಕ್ಕಮಗಳೂರು ಪರಿಶಿಷ್ಟಜಾತಿ ಮೀಸಲು, ಶೃಂಗೇರಿ, ತರೀಕೆರೆ ಹಾಗೂ ಕಡೂರು ಹೀಗೆ 04 ವಿಧಾನಸಭಾ ಕ್ಷೇತ್ರಗಳು ನೂತನವಾಗಿ ಅಸ್ಥಿತ್ವಕ್ಕೆ ಬಂದಿದ್ದವು. ಈ ವಿಧಾನಸಭಾ ಕ್ಷೇತ್ರಗಳ ಪೈಕಿ ಚಿಕ್ಕಮಗಳೂರು ದ್ವಿಸದಸ್ಯ ವಿಧಾನಸಭಾ ಕ್ಷೇತ್ರವಾಗಿ ಅಸ್ಥಿತ್ವಕ್ಕೆ ಬಂದಿತ್ತು. ಈ ಕ್ಷೇತ್ರದಲ್ಲಿ ಏಳು ಜನರು ವಿವಿಧ ರಾಜಕೀಯ ಪಕ್ಷಗಳಿಂದ ಸಾಮಾನ್ಯವರ್ಗದವರು ಹಾಗೂ ಪರಿಶಿಷ್ಟಜಾತಿ ವರ್ಗದವರು ಸ್ಪರ್ಧಿಸಿದ್ದರು. ಹಾಗೆಯೇ ಈ ಹಿಂದಿನ ಚುನಾವಣೆಯಲ್ಲಿ ದಲಿತ ಪ್ರಾತಿನಿಧತ್ವದಿಂದ ಆಯ್ಕೆ ಆಗಿದ್ದ ಜಿ.ಪುಟ್ಟಸ್ವಾಮಿ ಅವರು ಯಾವುದೇ ರಾಜಕೀಯ ಪಕ್ಷವನ್ನು ಅವಲಂಭಿಸದೇ ಸ್ವತಂತ್ರ ಅಭ್ಯರ್ಥಿಯಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಎಲ್.ಎಚ್.ತಿಮ್ಮಬೋವಿ ಹಾಗೂ ಪ್ರಜಾಸಮಾಜವಾದಿ ಪಕ್ಷದಿಂದ ಡಿ. ನಿಂಗಯ್ಯ ಎಂಬುವರು ಸ್ಪರ್ಧಿಸಿದ್ದರೂ ಆದರೆ ಮತದಾರ ಪ್ರಭುಗಳು ಮಾತ್ರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಉಮೇದುವಾರಿಕೆಯಿಂದ ಸ್ಪರ್ಧಿಸಿದ್ದ ಎಲ್.ಎಚ್.ತಿಮ್ಮಬೋವಿ ಜಯವನ್ನು ಗಳಿಸಿ ವಿಧಾನಸಭೆಯನ್ನು ಪ್ರವೇಶಿಸುವಂತೆ ಮಾಡಿದರು. ಇವರು ಕೂಡ ದಲಿತ ರಾಜಕಾರಣಕ್ಕೆ ತಮ್ಮ ವ್ಯಾಪ್ತಿಯಲ್ಲಿ ನ್ಯಾಯ ಒದಗಿಸಿದ್ದಾರೆ.

ಮೈಸೂರು ರಾಜ್ಯದಲ್ಲಿ ಮೂರನೇಯ ವಿಧಾನಸಭೆಗೆ ಚುನಾವಣೆಯೂ 1962ರಲ್ಲಿ ನಡೆದಿರುತ್ತದೆ. ಈ ಚುನಾವಣೆಯಲ್ಲಿ 208 ವಿಧಾನಸಭಾ ಕ್ಷೇತ್ರಗಳು ಅಸ್ಥಿತ್ವಕ್ಕೆ ಬಂದಿರುತ್ತವೆ. ಈ ಚುನಾವಣೆಯಲ್ಲಿ ದ್ವಿಸದಸ್ಯ ಕ್ಷೇತ್ರಗಳು ರದ್ದಾಗಿರುತ್ತವೆ. ಅವುಗಳ ಬದಲಿಗೆ 180 ಏಕಸದಸ್ಯ ಹಾಗೂ 27 ಪರಿಶಿಷ್ಟ ಜಾತಿಗಳ ಮೀಸಲು ಕ್ಷೇತ್ರಗಳು ಹಾಗೂ ಒಂದು ಪರಿಶಿಷ್ಟ ವರ್ಗದ ಜನವರ್ಗಕ್ಕೆ ಮೀಸಲು ಕ್ಷೇತ್ರವಾಗಿ ರಚಿತಗೊಂಡು ಚುನಾವಣೆಯೂ ನಡೆದಿರುತ್ತದೆ. ಈ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೃಂಗೇರಿ, ತರೀಕೆರೆ, ಕಡೂರು, ಚಿಕ್ಕಮಗಳೂರು ಸಾಮಾನ್ಯ ವಿಧಾನ ಸಭಾ ಕ್ಷೇತ್ರಗಳಾಗಿ ಹಾಗೂ ಮೂಡಿಗೆರೆ ಒಂದು ಪ್ರತ್ಯೇಕ ಪರಿಶಿಷ್ಟಜಾತಿಗೆ ಮೀಸಲು ವಿಧಾನಸಭಾ ಕ್ಷೇತ್ರವಾಗಿಯೇ ಈ ಚುನಾವಣೆಯಿಂದ ರಚಿತಗೊಂಡಿರುತ್ತದೆ. ಮೂಡಿಗೆರೆಯೂ

ಮೀಸಲು ವಿಧಾನಸಭಾ ಕ್ಷೇತ್ರಗಳ ಪೈಕಿ ಒಂದು ಪರಿಶಿಷ್ಟಜಾತಿ ಮೀಸಲು ಕ್ಷೇತ್ರವಾಗಿತ್ತು. ಈ ಕ್ಷೇತ್ರದಲ್ಲಿ ಪ್ರಜಾ ಸಮಾಜವಾದಿ ಪಕ್ಷದಿಂದ ಕೆ.ಎಚ್.ರಂಗನಾಥ್, ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಪಕ್ಷದಿಂದ ಎಲ್.ಎಚ್.ತಿಮ್ಮಬೋವಿ ಹಾಗೂ ಡಿ.ದೊಡ್ಡಯ್ಯ ಎಂಬುವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಈ ಕ್ಷೇತ್ರದಲ್ಲಿ ನಾಡಿನ ಸೌಮ್ಯ ಸ್ವಭಾವದ ಹಾಗೂ ಸ್ವಚಂದ ರಾಜಕೀಯ ಮುತ್ಸದ್ಧಿ ಕೆ.ಎಚ್.ರಂಗನಾಥ್ ಅವರು ಪ್ರಜಾ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿ ಪ್ರಪ್ರಥಮ ಬಾರಿಗೆ ಜಯವನ್ನು ಸಾಧಿಸಿ ಮೈಸೂರು ರಾಜ್ಯದ ವಿಧಾನಸಭೆಯನ್ನು ಪ್ರವೇಶಿಸಿದ್ದರು. ಇವರು ಗೆದ್ದ ನಂತರ ಈ ಚಿಕ್ಕಮಗಳೂರು ಜಿಲ್ಲೆಯಲ್ಲಿ ದಲಿತ ರಾಜಕಾರಣಕ್ಕೆ ಹಾಗೂ ಈ ಜನವರ್ಗದ ರಾಜಕೀಯ ಸ್ಥಿತಿಗತಿಯಲ್ಲಿ ಗುರುಪರವಾದಂಥ ಬದಲಾವಣೆಗಳಾದವು.

ಕೆ.ಎಚ್.ರಂಗನಾಥ್ ಅವರು ಮೂಡಿಗೆರೆ ಪರಿಶಿಷ್ಟಜಾತಿಗೆ ಮೀಸಲು ಕ್ಷೇತ್ರವಾಗಿ ರಚಿತಗೊಂಡಾಗ ಚುನಾವಣೆಗೆ ಸ್ಪರ್ಧಿಸಿ ಪ್ರಜಾ ಸಮಾಜವಾದಿ ಪಕ್ಷದಿಂದ 1962 ಮತ್ತು 1967 ಕ್ರಮವಾಗಿ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಿಸಿ ಜಯವನ್ನು ಕಂಡಿದ್ದರು. ಈ ಅವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳು ಹಾಗೂ ಆಡಳಿತದ ಕಲ್ಯಾಣ ಕ್ರಮಗಳು ಇಂದಿಗೂ ಅಲ್ಲಿನ ಜನತೆ ಸ್ಮರಿಸುತ್ತಿದ್ದಾರೆ.

ಹಾಗೆಯೇ ಜಿ. ಪುಟ್ಟಸ್ವಾಮಿ ಅವರು 1952ರಲ್ಲಿ ಚಿಕ್ಕಮಗಳೂರು–ಮೂಡಿಗೆರೆ ದ್ವಿಸದಸ್ಯ ಕ್ಷೇತ್ರವಾಗಿದ್ದಾಗ ಹಾಗೂ ಮೂಡಿಗೆರೆ ಪರಿಶಿಷ್ಟಜಾತಿಗೆ ಮೀಸಲು ವಿಧಾನಸಭಾ ಕ್ಷೇತ್ರವಾದಾಗ ಅಂದರೆ, 1972ರಲ್ಲಿ ಹೀಗೆ ಎರಡು ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿದವರು. ಇವರು ಕೂಡ ದಲಿತ ಸಬಲೀಕರಣಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಕೆಲಸವನ್ನು ಮಾಡಿದವರು.

ಕರ್ನಾಟಕ ರಾಜಕಾರಣದಲ್ಲಿ ಅದರಲ್ಲೂ ಮಹಿಳಾ ರಾಜಕಾರಣದ ಸಂದರ್ಭದಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದುಕೊಂಡಿರುವ ಹೆಸರು ಮೋಟಮ್ಮ. ಈ ಮೋಟಮ್ಮ ಅವರು ಈ ಮೂಡಿಗೆರೆ ಪರಿಶಿಷ್ಟಜಾತಿಗೆ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ 1978, 1989, 1999 ಮೂರು ಜಯಗೊಳಿಸಿದ್ದಾರೆ. ಹಾಗೆಯೇ 5 ಬಾರಿ ಸೋಲನ್ನು ಕಂಡಿದ್ದಾರೆ. ಆದರೂ ಕೂಡ ಒಬ್ಬ ದಿಟ್ಟ ಮಹಿಳೆಯಾಗಿ ರಾಜಕಾರಣಕ್ಕೆ ಅದರಲ್ಲೂ ಪ್ರಧಾನವಾಗಿ ದಲಿತ ರಾಜಕಾರಣಕ್ಕೆ ತಮ್ಮದೇ ಆದಂಥ ಕೊಡುಗೆಯನ್ನು ನೀಡಿದ್ದಾರೆ. 1999 ರಿಂದ 2004ರ ಈ ಕಾಲಾವಧಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರಾಗಿದ್ದರು. ಈ ಕಾಲಸಂದರ್ಭದಲ್ಲಿ ಮೋಟಮ್ಮ ಅವರು ಜಾರಿಗೆ ತಂದಿರುವ ಮಾದರಿಯ ಕಾರ್ಯಕ್ರಮಗಳು ಇಡೀ ದೇಶದಲ್ಲಿಯೇ ಹೆಚ್ಚು ಹೆಸರನ್ನು ಗಳಿಸಿದ್ದವು. ಅದರಲ್ಲಿ ಪ್ರಧಾನವಾಗಿ ಮಹಿಳೆಯರನ್ನು ಸಕಲ ರೀತಿಯಲ್ಲಿಯೂ ಸಬಲೀಕರಣಗೊಳಿಸುವ ಸ್ತ್ರೀಶಕ್ತಿ ಯೋಜನೆಯೂ ಮಹಿಳೆಯರನ್ನು ಹಾಗೂ ದಲಿತ

ಜನವರ್ಗವನ್ನು ಆರ್ಥಿಕವಾಗಿ ಸ್ವಾವಲಂಭಿಗಳಾಗಿ ಮಾಡಿರುತ್ತದೆ. ಇವತ್ತಿಗೂ ಒಬ್ಬ ಮಹಿಳೆ ತನ್ನ ಕುಟುಂಬ ಹಾಗೂ ಸಮಾಜದಲ್ಲಿ ಗೌರವ ಘನತೆಯಿಂದ ಬದುಕುತ್ತಿದ್ದಾಳೆ ಎಂದರೆ, ಅದಕ್ಕೆ ಈ ಸ್ತ್ರೀಶಕ್ತಿ ಕಾರ್ಯಕ್ರಮವೇ ಮೂಲ ಕಾರಣವೇ ಆಗಿರುತ್ತದೆ. ಹಾಗೆಯೇ ಅದರ ಅನುಷ್ಠಾನದ ಹಿಂದೆ ಕೆಲಸ ಮಾಡಿರುವಂಥ ಮೋಟಮ್ಮ ಅವರು ಪ್ರಮುಖ ಕಾರಣಕರ್ತರು ಎಂಬುದನ್ನು ರಾಜ್ಯದ ಮೂಲೆ– ಮೂಲೆಯಲ್ಲಿಯೂ ಮೊಳಗುತ್ತದೆ. ಆದರೆ, ಇಂಥ ದಲಿತರ ಪರ ಹಾಗೂ ಮಹಿಳಾಪರ ಕಾಳಜಿಯುಳ್ಳ ದಿಟ್ಟ ರಾಜಕಾರಣಿಯನ್ನು ಪ್ರಭುತ್ವವು ಸೋಲಿಸಿರುವುದು ದುರಂತದ ಸಂಗತಿ. ಪಿ.ತಿಮ್ಮಯ್ಯ ಎಂಬುವರು 1983ರಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ ಜಯವನ್ನು ಗಳಿಸಿ, ವಿಧಾನಸಭೆಯನ್ನು ದಲಿತರ ಪರವಾಗಿ ಪ್ರತಿನಿಧಿಸಿದ್ದರು. ಇವರು ಕೂಡ ದಲಿತ ರಾಜಕಾರಣಕ್ಕೆ ಹಾಗೂ ದಲಿತ ಜನವರ್ಗಕ್ಕೆ ಅಪಾರವಾದ ಕೊಡುಗೆಯನ್ನು ತಮ್ಮದೇ ಆದಂಥ ರೀತಿಯಲ್ಲಿ ಕೊಟ್ಟಿದ್ದಾರೆ.

ಕರ್ನಾಟಕ ರಾಜ್ಯದ ದಲಿತ ರಾಜಕಾರಣ ಸಂದರ್ಭದಲ್ಲಿ ಕೇಳಿಬರುವ ಹೆಸರು ಬಿ.ಬಿ.ನಿಂಗಯ್ಯ ಅವರದು. ಅವರು ಜನತಾ ಪಕ್ಷವನ್ನು ಪ್ರತಿನಿಧಿಸಿದವರು. 1985, 1994 ಹಾಗೂ 2013ರಲ್ಲಿ ಜನತಾಪಕ್ಷ, ಜನತಾದಳ ಹಾಗೂ ಜನತಾದಳ (ಜಾತ್ಯಾತೀತ) ಪಕ್ಷಗಳಿಂದ ಸ್ಪರ್ಧಿಸಿ ಜಯಗಳಿಸಿದ್ದರು. ಹಾಗೆಯೇ 1989, 1999, 2004, 2008, 2018ರಲ್ಲಿ ಸತತವಾಗಿ ಸೋಲನ್ನು ಕೂಡ ಕಂಡಿದ್ದಾರೆ. ಆದರೂ ದಲಿತ ಪರ ಕಾಳಜಿ ಇವರು ಚಿಕ್ಕಮಗಳೂರು ಜಿಲ್ಲೆಯಲ್ಲಿನ ಬಲಿಷ್ಠ ವರ್ಗದ ರಾಜಕಾರಣದ ಹಿಡಿತದಲ್ಲಿಯೂ ತಮ್ಮದೇ ಆದಂಥ ಛಾಪನ್ನು ಮೂಡಿಸಿದವರು. ಇವರು ಕೂಡ ಕ್ಷೇತ್ರದಲ್ಲಿನ ಜನತೆಗೆ ತಾವು ಪ್ರತಿನಿಧಿಸಿರುವ ಜನಾಂಗಕ್ಕೆ ಹಾಗೂ ರಾಜ್ಯದ ಕಲ್ಯಾಣಕ್ಕೆ ತಮ್ಮದೇ ಆದ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸಿ ಹೆಸರನ್ನು ಗಳಿಸಿದವರು.

ಹಾಗೆಯೇ ಈ ಚಿಕ್ಕಮಗಳೂರು ಜಿಲ್ಲೆಯಲ್ಲಿ ದಲಿತ ರಾಜಕಾರಣಕ್ಕೆ ಹಿಂಬನ್ನು ಕೊಟ್ಟಿರುವವರು ಎಂ.ಪಿ.ಕುಮಾರಸ್ವಾಮಿ. ಇವರು ಜನಸಂಘವನ್ನು, ಅಂದರೆ ಪ್ರಸ್ತುತ ಇರುವ ಭಾರತೀಯ ಜನತಾ ಪಕ್ಷವನ್ನು ಅವಲಂಭಿಸಿದವರು. ಅದರ ಉಮೇದುವಾರಿಕೆಯಿಂದ ಸ್ಪರ್ಧಿಸಿ 2004, 2008, 2018ರಲ್ಲಿ ಜಯವನ್ನು ಸಾಧಿಸಿದ್ದಾರೆ. ಹಾಗೆಯೇ 1999ರಲ್ಲಿ ಸೋಲಿನ ಕಹಿಯನ್ನು ಕೂಡ ಉಂಡಿದ್ದಾರೆ ಎಂದು ಹೇಳಬಹುದು. ಇವರು ಕೂಡ ದಲಿತಪರ ಕಾಳಜಿಯನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿತ್ವ, ದಲಿತರ ಕಲ್ಯಾಣಕ್ಕಾಗಿ ಸದಾಕಾಲವೂ ಅಪಹಪಿಸುತ್ತಿರುವ ಇವರು ಪ್ರಸ್ತುತ ರಾಜ್ಯವನ್ನು ಆಳುತ್ತಿರುವ ಸರ್ಕಾರದ ಪ್ರತಿನಿಧಿ ಆಗಿದ್ದಾರೆ. ಆದ್ದರಿಂದ, ಸರ್ಕಾರದಲ್ಲಿ ದಲಿತಪರ ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತಡವನ್ನು ತರುವ ಜವಾಬ್ದಾರಿ ಅವರ ಮೇಲೆ ಅಪಾರವಾಗಿಯೇ ಇದೆ. ಅದನ್ನು ಮಾಡುತ್ತೇನೆ ಎಂಬುದು ಅವರ ದೃಢಕಾಯದ ನಿಲುವಾಗಿರುವುದು ಅಧ್ಯಯನದ ಮೂಲಕ ಪ್ರಧಾನವಾಗಿ ಕಂಡುಬಂದಿರುತ್ತದೆ.

ಹೀಗೆ ಚಿಕ್ಕಮಗಳೂರು ಜಿಲ್ಲೆಯನ್ನು ಹಾಗೂ ದಲಿತ ಜನವರ್ಗವನ್ನು ಕಾಲಾನುಕ್ರಮದಲ್ಲಿ ಈ ಮೇಲೆ ಪ್ರಸ್ತಾಪಿಸಿರುವ ಹಲವು ನಾಯಕರುಗಳು ಪ್ರತಿನಿಧಿಸಿದವರು. ಹಾಗೆಯೇ ಆ ಮುಖೇನ ದಲಿತ ಸಬಲೀಕರಣಕ್ಕೆ ಕಟ್ಟಿಬದ್ಧರಾಗಿರುವುದನ್ನು ಅಧ್ಯಯನ ಮೂಲಕ ಕಂಡುಕೊಳ್ಳಲಾಗಿದೆ. ಮತ್ತೇ ಇವರು ದಲಿತರಿಗೆ ಮಾತ್ರ ನಾಯಕರಾಗಿರದೇ ಇತರರು ಇವರನ್ನು ಒಪ್ಪಿಕೊಂಡಿರುವುದನ್ನು ಗುರುತಿಸಬಹುದು. ದಲಿತ ರಾಜಕಾರಣದಲ್ಲಿ ಈ ಜಿಲ್ಲೆಯಿಂದ ಆಯ್ಕೆಯಾಗಿದ್ದಂಥ ಕೆ.ಎಚ್. ರಂಗನಾಥ, ಮೋಟಮ್ಮ ಹಾಗೂ ಬಿ.ಬಿ.ನಿಂಗಯ್ಯ ಅವರು ರಾಜ್ಯದಲ್ಲಿ ಪ್ರಭಾವಿತ ಜನನಾಯಕರೇ ಆಗಿಯೂ ಕೂಡ ರೂಪುಗೊಂಡಿದ್ದಾರೆ.

ರಾಷ್ಟ್ರ ಮತ್ತು ರಾಜ್ಯದಲ್ಲಿ ಪ್ರಮುಖ ದಲಿತ ನಾಯಕರು ಗುರುತಿಸಿಕೊಂಡರೆ, ಅವರ ಗರಡಿಯಲ್ಲಿಯೇ ಹಲವು ಸ್ಥಳೀಯ ನಾಯಕರುಗಳು ಸೃಷ್ಟಿಸಿಕೊಂಡಿದ್ದಾರೆ. ಅವರಿಗೆ ಸ್ಥಳೀಯ ಸ್ವಯಂ–ಸಂಸ್ಥೆಗಳಲ್ಲಿ ಅವಕಾಶಗಳನ್ನು ಕಲ್ಪಿಸಿಕೊಟ್ಟಿರುತ್ತಾರೆ. ಅದರ ವಿವರವನ್ನು ಈ ಮುಂದಿನಂತೆ ಗುರುತಿಸಲಾಗಿದೆ. ಯಾವುದೇ ಒಂದು ಜನವರ್ಗಕ್ಕೆ ತನ್ನ ಅಸ್ಥಿತ್ವವನ್ನು ಗಟ್ಟಿಯಾಗಿ ಕಂಡುಕೊಳ್ಳಬೇಕಾದರೆ, ಆ ಜನವರ್ಗಕ್ಕೆ ರಾಜಕೀಯದ ಬೆಂಬಲ ಮತ್ತು ಆಶೀರ್ವಾದವೂ ಕೂಡ ಅಗತ್ಯವಾಗಿರುತ್ತದೆ. ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದಿಂದ ನೇರವಾಗಿ ಜನವರ್ಗಗಳನ್ನು ತಲುಪಲು ಸಾಧ್ಯವಿಲ್ಲ ಎಂಬುದನ್ನು ಅರಿತಂಥ ಆಳುವ ವರ್ಗಗಳು ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ವಿಕೇಂದ್ರೀಕರಣವನ್ನು ಮಾಡಲಾಗಿರುತ್ತದೆ. ಈ ಮುಖೇನ ಆಡಳಿತದಲ್ಲಿ ಎಲ್ಲಾ ಜನವರ್ಗಗಳು ಪಾಲ್ಗೊಳ್ಳುವಿಕೆ ಮತ್ತು ರಾಜಕೀಯ ನಿರ್ಧಾರ ಕೈಗೊಳ್ಳುವಿಕೆಯನ್ನು ಶಕ್ತಗೊಳಿಸಿದೆ. ಇದಕ್ಕೆ ಅವಕಾಶವು ಸರಿಯಾದ ಕ್ರಮದಲ್ಲಿ ದೊರಕಿದ್ದು, ಮಾತ್ರ 1992–93ರಲ್ಲಿ ಎಂದು ಹೇಳಬಹುದು. ಏಕೆಂದರೆ ಈ ಕಾಲಸಂದರ್ಭದಲ್ಲಿ ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿಗಳನ್ನು ತರುವ ಮೂಲಕ ಮೂರು ಹಂತದಲ್ಲಿ ಸ್ಥಳೀಯ ಸರ್ಕಾರಗಳನ್ನು ಅಸ್ಥಿತ್ವಕ್ಕೆ ತರಲಾಗಿರುತ್ತದೆ. ಅಂದರೆ, ಗ್ರಾಮೀಣ ಜನವರ್ಗಗಳಿಗೆ ತಳಮಟ್ಟದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಪ್ರದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳನ್ನು ಅಸ್ಥಿತ್ವಕ್ಕೆ ತರಲಾಗಿರುತ್ತದೆ. ಈ ಮೂಲಕವಾಗಿ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿರುವ ಜನತೆಗೆ ರಾಜಕೀಯವಾಗಿ ಪ್ರಾತಿನಿಧ್ಯ ನೀಡಲಾಗಿರುತ್ತದೆ. ಹೀಗೆ ಅವಕಾಶವನ್ನು ನೀಡಿ ರಾಜಕೀಯವಾಗಿ ಭಾಗವಹಿಸಲು ಅನುವು ಮಾಡಿಕೊಟ್ಟಿರುತ್ತದೆ. ಇದರಿಂದಾಗಿ ಸಮಾಜದಲ್ಲಿ ನಿರ್ಲಕ್ಷಿತವಾಗಿರುವ ಹಾಗೂ ಮುಖ್ಯವಾಹಿನಿಯಿಂದ ಹೊರಗಿಟ್ಟಿರುವ, ಹೊರಗುಳಿದಿರುವ ಜನವರ್ಗಗಳೂ ಕೂಡ ರಾಜಕೀಯವಾಗಿ ತಮ್ಮದೇ ಆದಂಥ ನಿರ್ಧಾರವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿರುವುದನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಗ್ರಾಮೀಣ ಆಡಳಿತದಲ್ಲಿ ತೊಡಗಿ ಕೊಂಡಿರುವ ವಿವರಗಳನ್ನು ಈ ಮುಂದಿನಂತೆ ದಾಖಲೀಸಲಾಗಿರುತ್ತದೆ.

ಈ ಚಿಕ್ಕಮಗಳೂರು ಜಿಲ್ಲೆಯಲ್ಲಿ ಏಳು ತಾಲೋಕುಗಳಿಂದ ಜಿಲ್ಲಾ ಮಟ್ಟದಲ್ಲಿ ರಚಿತಗೊಂಡಿರುವ ಜಿಲ್ಲಾ ಪಂಚಾಯಿತಿಯಲ್ಲಿ ಪ್ರಸ್ತುತ 343 ಜನ ಸದಸ್ಯರಿದ್ದು, ಅವರಲ್ಲಿ 15 ಪುರುಷ ಹಾಗೂ 18 ಮಹಿಳೆಯರು ಇದ್ದಾರೆ. ಇವರಲ್ಲಿ ದಲಿತರು ಒಟ್ಟು 08 ಜನರಿದ್ದು ಶೇಕಡ 23.53 ರಷ್ಟು, ಇವರಲ್ಲಿ 4 ಪುರುಷರು ಶೇಕಡ 25ರಷ್ಟು ಹಾಗೂ 04 ಮಹಿಳೆಯರು ಶೇಕಡ 22.22ರಷ್ಟಿದ್ದಾರೆ. ಹಾಗೆಯೇ 7 ಏಳು ತಾಲೋಕುಗಳಲ್ಲಿ 7 ತಾಲೋಕು ಪಂಚಾಯಿತಿಗಳು ರಚಿತಗೊಂಡಿದ್ದು, ಅವುಗಳಲ್ಲಿ ಒಟ್ಟು 110 ಜನಸದಸ್ಯರಿದ್ದು, ಇವರಲ್ಲಿ 48 ಪುರುಷ ಹಾಗೂ 62 ಮಹಿಳಾ ಸದಸ್ಯರಿದ್ದಾರೆ. ಇವರುಗಳಲ್ಲಿ ದಲಿತ ಪ್ರತಿನಿಧಿಗಳು 28 ಜನರು ಶೇಕಡ 25.45ರಷ್ಟಿದ್ದು, ಇವರಲ್ಲಿ 9 ಪುರುಷರು ಶೇಕಡ 18.71ರಷ್ಟು ಹಾಗೂ 14 ಮಹಿಳೆಯರಿದ್ದು ಶೇಕಡ 22.58ರಷ್ಟಿರುವುದು ಕಂಡು ಬಂದಿರುತ್ತದೆ. ಹಾಗೆಯೇ ಗ್ರಾಮಪಂಚಾಯಿಯಲ್ಲಿ ದಲಿತರ ಪ್ರಾತಿನಿಧ್ಯವನ್ನು ಗ್ರಹಿಸಿದಾಗ, ಜಿಲ್ಲೆಯಲ್ಲಿ 227 ಗ್ರಾಮ ಪಂಚಾಯಿತಿಗಳಲ್ಲಿ ರಚಿತಗೊಂಡಿದ್ದು, ಅವುಗಳಲ್ಲಿ ಒಟ್ಟು 2405 ಜನಸದಸ್ಯರಿದ್ದು, ಅವರಲ್ಲಿ 1240 ಪುರುಷರು ಹಾಗೂ 1165 ಮಹಿಳೆಯರು ಇದ್ದಾರೆ. ಇವರಲ್ಲಿ ದಲಿತರು 538 ಜನರಿದ್ದು ಶೇಕಡ 22.37ರಷ್ಟಿದ್ದು ಇವರಲ್ಲಿ 269 ಪುರುಷರು ಹಾಗೂ 269 ಮಹಿಳೆಯರು ಇರುವುದನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿನ ಪಂಚಾಯತ್ ರಾಜ್ ವ್ಯವಸ್ಥೆಯ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ದಲಿತ ಜನವರ್ಗದ ಸದಸ್ಯರು ಸರಾಸರಿ ಪ್ರಾತಿನಿಧ್ಯವೂ ಶೇಕಡ 23.78ರಷ್ಟಿರುವುದನ್ನು ಗ್ರಹಿಸಬಹುದು. ಅವರ ಪ್ರಾತಿನಿಧ್ಯ ತಾಲೋಕು ಪಂಚಾಯಿತಿಗಳಲ್ಲಿ ಗರಿಷ್ಠವಾಗಿದೆ. ಅಂದರೆ ಶೇಕಡ 25.4ರಷ್ಟಿದೆ. ಜಿಲ್ಲಾ ಪಂಚಾಯಿತಿಯಲ್ಲಿ ಒಟ್ಟು ಸದಸ್ಯರ ಪೈಕಿ, ದಲಿತರ ಪ್ರಾತಿನಿಧ್ಯ ಶೇಕಡ 23.53ರಷ್ಟಿದೆ. ಮತ್ತೇ ಗ್ರಾಮಪಂಚಾಯಿತಿ ಮಟ್ಟದಲ್ಲಿ, ಅವರ ಪ್ರಾತಿನಿಧ್ಯವು ಶೇಕಡ 22.37ರಷ್ಟಿದೆ. ಮತ್ತೊಂದು ಆರೋಗ್ಯಕರ ಬೆಳವಣಿಗೆಯೆಂದರೆ, ಗ್ರಾಮಪಂಚಾಯಿತಿ ಮತ್ತು ತಾಲೋಕು ಪಂಚಾಯಿತಿಗಳಲ್ಲಿ ದಲಿತ ಮಹಿಳೆಯ ಸಂಖ್ಯೆಯೂ ದಲಿತ ಪುರುಷರ ಪ್ರಾತಿನಿಧ್ಯಕ್ಕಿಂತಲೂ ಹೆಚ್ಚಾಗಿರುತ್ತದೆ. ಈ ನೆಲೆಯಿಂದಲೇ ಸರ್ಕಾರದ ಸದೃಢ ಸಂಕಲ್ಪದ ಪರಿಣಾಮವಾಗಿ ಪ್ರಸ್ತುತ ದಿನಗಳಲ್ಲಿ ಮಹಿಳೆಯರು ರಾಜಕೀಯವಾಗಿ ಭಾಗವಹಿಸುವಿಕೆಯಲ್ಲಿ ಹೆಚ್ಚು ಆಸಕ್ತಿಯನ್ನು ತೋರುತ್ತಿದ್ದಾರೆ ಎಂಬುದನ್ನು ಅಧ್ಯಯನದಿಂದ ಪ್ರಧಾನವಾಗಿ ಕಂಡುಕೊಳ್ಳಲಾಗಿದೆ. ಹಾಗೆಯೇ ದಲಿತರ ರಾಜಕೀಯ ಸ್ಥಿತಿಗತಿಯಲ್ಲಿ ಸ್ಥಿರತೆಯನ್ನು ಹಾಗೂ ಉದ್ದೇಶಿತ ಗುರಿಗಳನ್ನು ಈಡೇರಿಸಲು, ದಲಿತರು ಇದೇ ಪ್ರಾತಿನಿಧತ್ವವನ್ನು ಕಾಯ್ದುಕೊಳ್ಳಬೇಕು. ಹಾಗೆಯೇ ಈ ಅವಕಾಶವೂ ಸದ್ಬಳಕೆಯೂ ಆಗಬೇಕು ಎಂಬುದು ಅಧ್ಯಯನದ ಆಶಯವೇ ಆಗಿರುತ್ತದೆ.

ಸಂವಿಧಾನದ 74ನೇ ತಿದ್ದುಪಡಿಯ ಅನ್ವಯ ಪ್ರಭುತ್ವದ ನಗರ ಪ್ರದೇಶದಲ್ಲಿನ ಆಡಳಿತ ವಿಕೇಂದ್ರೀಕರಣ ಸಾಧ್ಯವಾಗಿದೆ. ಆದ್ದರಿಂದಲೇ ದೇಶದಾದ್ಯಂತ ನಗರ ಸರ್ಕಾರಗಳು ಅಸ್ಥಿತ್ವವನ್ನು ಪಡೆದುಕೊಂಡಿರುತ್ತವೆ. ಹಾಗೆಯೇ ಈ ಚಿಕ್ಕಮಗಳೂರು ಜಿಲ್ಲೆಯಲ್ಲಿ 8 ನಗರ ಸ್ಥಳೀಯ ಸಂಸ್ಥೆಗಳು ವಿವಿಧ ತಾಲೋಕುಗಳಲ್ಲಿ ಕಾರ್ಯನಿರ್ವಹಿಸುತ್ತವೆ ಎಂಬುದು ತಿಳಿದು ಬರುತ್ತದೆ. ಇದರಿಂದಾಗಿ ಸಾಮಾಜಿಕವಾಗಿ ನಿರ್ಲಕ್ಷ್ಯ ಗುರಿಯಾಗಿದ್ದ ಜನವರ್ಗಗಳಲ್ಲಿ ಗುಂಪುಗಳ ಸಹಭಾಗಿತ್ವಕ್ಕೆ ಸಾಕಷ್ಟು ರೀತಿಯಲ್ಲಿ ಅವಕಾಶಗಳು ಸೃಷ್ಟಿಯಾಗಿರುತ್ತವೆ. ಈ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಲಿತರ ಸರಾಸರಿ ಪ್ರಾತಿನಿಧತ್ವವೂ ಶೇಕಡ 12.43ರಷ್ಟಿದೆ. ಅದನ್ನು ಈ ಮುಂದಿನಂತೆ ಚರ್ಚಿಸಲಾಗಿದೆ. ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳು ಈ ಜಿಲ್ಲೆಯಲ್ಲಿ ರಚಿತಗೊಂಡಿರುತ್ತವೆ. ಅವುಗಳಲ್ಲಿ ನಗರಸಭೆಯು ಒಟ್ಟು 35 ಜನ ಸದಸ್ಯರನ್ನು ಹೊಂದಿದ್ದು ಅವರಲ್ಲಿ 23 ಪುರುಷರು ಹಾಗೂ 12 ಜನ ಮಹಿಳಾ ಸದಸ್ಯರಿದ್ದಾರೆ. ಇವರಲ್ಲಿ 4 ಜನ ದಲಿತರಿದ್ದು ಇವರಲ್ಲಿ 3 ಜನ ಪುರುಷರು ಶೇಕಡ 13.04ರಷ್ಟು ಹಾಗೂ ಒಬ್ಬ ಮಹಿಳೆಯು ಪ್ರಾತಿನಿಧ್ಯವನ್ನು ಪಡೆದುಕೊಂಡು ಶೇಕಡ 8.33ರಷ್ಟಿದ್ದಾರೆ.

ಹಾಗೆಯೇ ಪುರಸಭೆಯಲ್ಲಿ ಒಟ್ಟು 69 ಜನ ಸದಸ್ಯರಿದ್ದು, ಅದರಲ್ಲಿ 45 ಪುರುಷರು ಹಾಗೂ 24 ಮಹಿಳಾ ಸದಸ್ಯರಿದ್ದಾರೆ. ಇವರ ಪೈಕಿ 10 ಜನ ದಲಿತರಿದ್ದು, 7 ಜನ ಪುರುಷರು ಶೇಕಡ 15.5ರಷ್ಟಿದ್ದು, ಹಾಗೂ 3 ಜನ ಮಹಿಳೆಯ ಶೇಕಡ 12.50ರಷ್ಟಿದ್ದಾರೆ. ಇನ್ನು ಪಟ್ಟಣ ಪಂಚಾಯಿತಿಯಲ್ಲಿ ದಲಿತರ ಪ್ರಾತಿನಿಧ್ಯವನ್ನು ಗ್ರಹಿಸಿದಾಗ; ಒಟ್ಟು 44 ಜನ ಸದಸ್ಯರಿದ್ದು, ಅವರಲ್ಲಿ 21 ಜನ ಪುರುಷರು ಹಾಗೂ 23 ಜನ ಮಹಿಳಾ ಸದಸ್ಯರು ಇದ್ದು, ಅವರಲ್ಲಿ ದಲಿತ ಸದಸ್ಯರು ಒಬ್ಬರು ಪುರುಷರು ಶೇಕಡಾ 476 ರಷ್ಟು ಹಾಗೂ 04 ಜನ ಮಹಿಳೆಯರು ಶೇಕಡ 17.39ರಷ್ಟಿದೆ ಎಂಬುದು ತಿಳಿದುಬಂದಿರುತ್ತದೆ.

ರಾಜ್ಯದಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೋಲಿಸಿದಾಗ; ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಲಿತ ಜನವರ್ಗದ ಸದಸ್ಯರ ಪ್ರಾತಿನಿಧ್ಯವೂ ಸಾಪೇಕ್ಷವಾಗಿ ಕಡಿಮೆ ಇರುತ್ತದೆ. ಜಿಲ್ಲೆಯ ನಗರಸಭೆಯಲ್ಲಿ ಅವರ ಪ್ರಾತಿನಿಧ್ಯವು ಶೇಕಡಾ 11.43ರಷ್ಟಿದೆ. ಪುರಸಭೆಯಲ್ಲಿ ಶೇಕಡ 14.49ರಷ್ಟು ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಶೇಕಡ 11.36ರಷ್ಟಿದೆ. ಮತ್ತೊಂದು ಗಣನೀಯವಾದಂಥ ಅಂಶವೇನೆಂದರೆ; ಪಟ್ಟಣ ಪಂಚಾಯಿತಿಗಳಲ್ಲಿ ಮಾತ್ರ ಈ ದಲಿತ ಜನವರ್ಗಗಳ ಮಹಿಳಾ ಪ್ರತಿನಿಧಿಗಳ ಪ್ರಾತಿನಿಧ್ಯವು ಪುರುಷರಿಗಿಂತ ಅಧಿಕವಾಗಿದೆ. ಹಾಗೆಯೇ ನಗರಸಭೆ ಹಾಗೂ ಪುರಸಭೆಗಳಲ್ಲಿ ದಲಿತ ಜನವರ್ಗದ ಪುರುಷ ಸದಸ್ಯ ಸಂಖ್ಯೆ ಮಹಿಳಾ ಸದಸ್ಯರಿಗಿಂತ ಹೆಚ್ಚಾಗಿದೆ. ಇದೇಲ್ಲದರ ಅರ್ಥವೆಂದನೆಂದರೆ; ಮಹಿಳೆಯರ ಭಾಗವಹಿಸುವಿಕೆಯು ತಳಮಟ್ಟದ ಆಡಳಿತದಲ್ಲಿ ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತಿದೆ. ಆದರೆ, ಉನ್ನತ

ಹಂತದ ಆಡಳಿತದ ವ್ಯವಸ್ಥೆಯಲ್ಲಿ ಅವರ ಪ್ರಾತಿನಿಧ್ಯ ಸಾಕಷ್ಟಿಲ್ಲ. ದಲಿತ ಜನವರ್ಗದ ಮಹಿಳೆಯರ ರಾಜಕೀಯ ಸಬಲೀಕರಣದ ಕಾರ್ಯತಂತ್ರಗಳನ್ನು ರೂಪಿಸುವಾಗ ಈ ತಾರತಮ್ಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾದ ಅನಿವಾರ್ಯತೆಯಿದೆ ಎಂದೇ ಹೇಳಬಹುದು.

ಹೀಗೆ, ಚಿಕ್ಕಮಗಳೂರು ಜಿಲ್ಲೆಯಲ್ಲಿನ ದಲಿತ ರಾಜಕಾರಣವನ್ನು ಪರಿವೀಕ್ಷಣೆಗೆ ಒಳಪಡಿಸಿದಾಗ ಈ ಮೇಲಿನ ಫಲಿತಾಂಶವೂ ಕಂಡುಬಂದಿರುತ್ತದೆ. ಹಾಗಾಗಿಯೇ ಪ್ರಸ್ತುತ ರಾಷ್ಟ್ರ ಮತ್ತು ರಾಜ್ಯದಲ್ಲಿನ ರಾಜಕಾರಣದ ಸಂದರ್ಭದಲ್ಲಿ ದಲಿತ ಜನವರ್ಗ ಹಾಗೂ ಅದನ್ನು ಪ್ರತಿನಿಧಿಸಿತ್ತಿರುವಂದ ಜನನಾಯಕರು ನಿರ್ಣಾಯಕವಾದಂಥ ಪಾತ್ರವನ್ನು ನಿರ್ವಹಿಸಬೇಕಾದ ಅನಿವಾರ್ಯತೆ ಇದೇ ಎಂಬುದು ಈ ಅಧ್ಯಯನದ ಪ್ರಮುಖ ಆಶಯವೇ ಆಗಿರುತ್ತದೆ.

**ಅಧ್ಯಯನದಲ್ಲಿ ಪರಾಮರ್ಶಿಸಲಾಗಿರುವ ಗ್ರಂಥಗಳು**

1. Statistical Report on General Election 1951 to The Legislative Assembly of Mysore
2. Statistical Report on General Election 1957 to The Legislative Assembly of Mysore
3. Statistical Report on General Election 1962 to The legislative Assembly of Mysore
4. Rural Development and Panchayat Raj Department, Zilla Panchayat, Chikkamagalure, 2018-19, Annual Report
5. Karnataka District Fact book – Chikamagaur District, Dr. R.K. Thukral (ed), 2019, Datanet India.
6. Kshirsagar. R.K., Dalit Movements in India and its Leaders, M.D. Publishers, New Delhi, 1994
7. Sanjay Paswan and Paramanshi Jaideva, Encyclopeadia of Dalits in India, Vol. I to 10, Kalpaz Publishers, Delhi, 2002
8. Vivek Kumar, Dalit Leadership in India, Kalpaz Publications, Delhi, 2002
9. Prakash Louis, Political Sociology of Dalit Assertion, Gyan Publishing House, Delhi, 1997
10. ಚಿನ್ನಸ್ವಾಮಿ ಸೋಸಲೆ.ಎನ್, ದಲಿತರ ಬದುಕು–ಮೆಲುಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2012.
11. ಗೊ.ರು.ಚನ್ನಬಸಪ್ಪ ಮತ್ತು ಜಿ. ಪಾರ್ಥಸಾರತಿ, ಚಿಕ್ಕಮಗಳೂರು ಜಿಲ್ಲಾ ದರ್ಶನ, 1986
12. ಗೋಪಾಲ್ .ಆರ್ (ಸಂ) ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2009

13. ಡಾ.ಸೂರ್ಯನಾಥ ಯು. ಕಾಮತ್ (ಸಂ) ಚಿಕ್ಕಮಗಳೂರು ಜಿಲ್ಲಾ ಗೆಜೆಟಿಯರ್, 1985
14. ಚಿಕ್ಕಮಗಳೂರು ಜಿಲ್ಲೆ ಅಂಕಿ–ಅಂಶಗಳ ನೋಟ, 2018–19